ವಿಷಯ : ರಾಣೆಬೆನ್ನೂರು ತಾಲ್ಲೂಕಿನಲ್ಲಿ ಗ್ರಾಮಾಂತರ ಕುಡಿಯುವ ನೀರಿನ ಯೋಜನೆ.

ಪ್ರ. ಸಂಖ್ಯೆ 598 (1467) ಡಾ. ಹೆಗ್ಗಪ್ಪ (ಬ್ಯಾಡಗಿ).— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ ?

(ಅ) ಬ್ಯಾಡಗಿ ಹಾಗೂ ರಾಣೆಬೆನ್ನೂರು ತಾಲ್ಲೂಕುಗಳಲ್ಲಿ ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆಗಾಗಿ ಯಾವ ಯಾವ ಊರಿನವರು ಎಷ್ಟೆಷ್ಟು ಹಣ ಯಾವ ಯಾವ ಸಾಲಿನಲ್ಲಿ ತುಂಬಿದ್ದಾರೆ ;

(ಆ) ಬೆನಕನಗೊಂಡ (ರಾಣೆಬೆನ್ನೂರು ತಾಲ್ಲೂಕು) ಗ್ರಾಮದವರು ಹಣ ಸಂದಾಯ ಮಾಡಿದ್ದರೂ ಸದರಿ ಗ್ರಾಮಕ್ಕೆ ಈ ಯೋಜನೆಯನ್ವಯ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸದಿರುವುದಕ್ಕೆ ಕಾರಣಗಳೇನು ;

(ಇ) ಈ ಎರಡು ತಾಲ್ಲೂಕಿನ ಶೇಕಡ ತೊಂಬತ್ತರಷ್ಟು ಹಳ್ಳಿಗಳಲ್ಲಿ ನೀರಿನ ಅತೀವ ತೊಂದರೆ ಇದ್ದರೂ ಕುಡಿಯುವ ನೀರಿನ ಸೌಲಭ್ಯವನ್ನು ಜದಗಿಸುವಲ್ಲಿ ಸರ್ಕಾರದವರು ವಿಳಂಬ ನೀತಿ ಅನುಸರಿಸುತ್ತಿರುವುದಕ್ಕೆ ಕಾರಣಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ವಿವರಗಳನ್ನು ಅನುಬಂಧ–1ರಲ್ಲಿ ಕೊಡಲಾಗಿದೆ.

(ಆ) 1981–82ರವರೆಗೆ ಈ ಯೋಜನೆಗೆ ಜಿಲ್ಲಾ ಅಭಿವೃದ್ಧಿ ಮಂಡಳಿಯ ಅನುಮತಿ ದೊರೆಯಲಿಲ್ಲ. 1981–82ನೇ ಸಾಲಿನಲ್ಲಿ ಜಿಲ್ಲಾ ಅಭಿವೃದ್ಧಿ ಮಂಡಳಿಯು ಶಿಫಾರಸ್ಸು ಮಾಡಿತ್ತು. ಆದರೆ 1981–82ರ ಸಾಲಿನಲ್ಲಿ ಅವಶ್ಯಕತೆ ಮತ್ತು ಅನುದಾನಗಳ ಲಭ್ಯತೆಯ ಮೇರೆಗೆ ಈ ಯೋಜನೆಗೆ ಅನುಮತಿ ದೊರೆಯಲಿಲ್ಲ. ನಂತರ ಜಿಲ್ಲಾ ಅಭಿವೃದ್ಧಿ ಮಂಡಳಿಯು ಶಿಫಾರಸ್ಸು ಮಾಡಿರುವುದಿಲ್ಲ. ಆದಾಗ್ಯೂ 1985–86ನೇ ಸಾಲಿನಲ್ಲಿ ಈ ಯೋಜನೆಯನ್ನು ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

(ಇ) ಬ್ಯಾಡಗಿ ತಾಲ್ಲೂಕಿನಲ್ಲಿ 63 ಮುಖ್ಯ ಗ್ರಾಮಗಳಿದ್ದು ರಾಣೆಬೆನ್ನೂರು ತಾಲ್ಲೂಕಿನಲ್ಲಿ 103 ಮುಖ್ಯ ಗ್ರಾಮಗಳಿರುತ್ತವೆ. ಇವುಗಳಲ್ಲಿ ಬ್ಯಾಡಗಿ ತಾಲ್ಲೂಕಿನ 40 ಗ್ರಾಮಗಳು ಹಾಗೂ ರಾಣೆಬೆನ್ನೂರಿನ 64 ಗ್ರಾಮಗಳು ಕುಡಿಯುವ ನೀರಿನ ಅಭಾವವುಳ್ಳ ಗ್ರಾಮಗಳೆಂದು 31-8-80ರ ಪಟ್ಟಿಯ ಪ್ರಕಾರ ಗುರುತಿಸಲಾಗಿದೆ. ಈ ಎರಡು ತಾಲ್ಲೂಕಿನ ಎಲ್ಲಾ ಅಂದರೆ ಕ್ರಮವಾಗಿ 40 ಮತ್ತು 64 ಗ್ರಾಮಗಳಿಗೆ ಕೊಳವೆ ಬಾವಿಯಿಂದಾಗಲಿ ಅಥವಾ ನಲ್ಲಿ ನೀರು ಯೋಜನೆಯಿಂದಾಗಲಿ ಸುರಕ್ಷಿತವಾದ ನೀರನ್ನು ಸರಬರಾಜು ಮಾಡಲು ವ್ಯವಸ್ಥೆ ಮಾಡಿದೆ. ಇದಲ್ಲದೆ, ಬ್ಯಾಡಗಿ ತಾಲ್ಲೂಕಿನ ಇತರೆ 23 ಗ್ರಾಮಗಳು ಮತ್ತು ರಾಣೆಬೆನ್ನೂರಿನ 39 ಗ್ರಾಮಗಳಲ್ಲಿಯೂ ಸಹ ಕೊಳವೆ ಬಾವಿಗಳನ್ನು ತೋಡಿ ಸುರಕ್ಷಿತವಾದ ನೀರು ಸರಬರಾಜು ಮಾಡಲಾಗುತ್ತಿದೆ. ಆದರೆ, ಕೆಲವು ಕಡೆಗಳಲ್ಲಿ ಬೇಕಾದಷ್ಟು ನೀರು ಒದಗಿಸಿದೆ ಇರಬಹುದು ಇದಕ್ಕೆ ಕಾರಣ ಹಣದ ಕೊರತೆ.

ಅನುಬಂಧ–I

ಕ್ರಮ ಸಂಖ್ಯೆ	ಯೋಜನೆಯ ಹೆಸರು	ವಲಯ	ಅಂದಾಜು ಪಟ್ಟಿಯ ಮೊಬಲಗು	ಶೇಕಡ 10ರಂತೆ ಪಂತಿಗೆ ತುಂಬಿದ್ದು	ಹಣ ಸಂದಾಯ ಮಾಡಿದ ವರ್ಷ	ಯೋಜನೆ ಪೂರ್ಣಗೊಂಡ ವರ್ಷ	ಷರಾ
1	2	3	4	5	6	7	8
			ಲಕ್ಷ ರೂಗಳಲ್ಲಿ				
	ಬ್ಯಾಡಗಿ ತಾಲ್ಲೂಕು ;						
1.	ಸಿದೆನೂರು	ರಾಜ್ಯ	1.90	17,830–00	1978	1979	ಯೋಜನೆಯು ನೇರವಾಗಿ ಪಂಪು ಮಾಡಲಾಗಿದೆ. 1984-85ನೇ ಸಾಲಿನಲ್ಲಿ ಮುಗಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ.
2.	ಕದರಮಂಡಲಗಿ	ರಾಜ್ಯ	1.64	14,860–00	1978	1979	ಸದರ
	ರಾಣಿಬೆನ್ನೂರು ತಾಲ್ಲೂಕು ;						
1.	ತುಮ್ಮಿನಕಟ್ಟಿ	ಕೇಂದ್ರ	3.81	21,000-00	1978	1981	ಯೋಜನೆ ಪೂರ್ಣಗೊಂಡಿದೆ
2.	ಚಿಕ್ಕುರವತ್ತಿ	ಕೇಂದ್ರ	0.72	5,000–00	1972	1980	ಸದರ
3.	ಹೊನ್ನತ್ತಿ	ರಾಜ್ಯ	3.63	3,000–00	....	1983	ಸದರ

1	2	3	4	5	6	7	
4.	ಹರನಗೇರಿ	ರಾಜ್ಯ	1.98	5,750–00	....	1981	ಯೋಜನೆಯು ನೇರವಾಗಿ ಪಂಪು ಮಾಡಲಾಗಿದ್ದು 1984-85ನೇ ಸಾಲಿನಲ್ಲಿ ಮುಗಿಸುವ ಗುರಿಯನ್ನು ಹಾಕಿಕೊಳ್ಳಲಾಗಿದೆ.
5.	ಬೇಲೂರು	ಕೇಂದ್ರ	0.72	3,225–00	1977	1980	ಸದರ
6.	ಕರೂರ	ರಾಜ್ಯ	2.31	24,700–00	1969	1979	ಸದರ
7.	ಕುಸುಗೂರು	ಕೇಂದ್ರ	1.37	5,000–00	1978	1982	ಯೋಜನೆಯು ಪೂರ್ಣಗೊಂಡಿದೆ
8.	ಚಲ್‌ಗೇರಿ	ರಾಜ್ಯ	2.69	25,900–00	1969	1979	ಸದರ
9.	ಅಂತ್ರವಳ್ಳಿ	ರಾಜ್ಯ	0.48	3,720–00	1977	1980	ಸದರ
10.	ವಿಲ್ಲಾಪುರ ಬಿ. ಮೆಟ್ಲೇರಿ	ರಾಜ್ಯ	0.32	2,780–00	1977	1980	ಸದರ
11.	ಕೋರಿಯಾಳ	ರಾಜ್ಯ	1.39	10,000-00	1971	1979	ಸದರ
12.	ಮದೇನೂರು	ಕೇಂದ್ರ	3.14	29,900–00	....	1980	ಯೋಜನೆಯು ಪ್ರಗತಿ ಪಥದಲ್ಲಿದೆ
13.	ಮಾರನೂರು	ಕೇಂದ್ರ	....	....			
14.	ನಾಗೇನಹಳ್ಳಿ	ಕೇಂದ್ರ	....	....			
15.	ಹನುಮನಹಳ್ಳಿ		....	....			
16.	ತೆರೆದಹಳ್ಳಿ		....	....			
17.	ಬಿನಕೊನಕೊಂಡ		....	12,000–00	1969	....	ಯೋಜನೆಯು ಪೂರ್ಣಗೊಂಡಿದೆ. ಅನಂ. 15 ಹಾಗೂ 16ಕ್ಕೆ ಮಂಜೂರಾತಿ ದೊರೆತ್ತಿಲ್ಲ
18.	ವುಕ್ಕುಂದ		....	....	1979	....	ಈ ಯೋಜನೆಗೆ ಮಂಜೂರಾತಿ ದೊರೆತಿರುವುದಿಲ್ಲ